

(ಗುಂಡನ ಅಕ್ಕ, ತನ್ನ ಮಕ್ಕಳ ಸಮೇತ ಮೈಸೂರಿಗೆ ಹೋದಳು)

ಅಕ್ಕ: ನಿಮ್ ಅಪ್ಪ ಅಮ್ಮ ಎಲ್ಲಿಗೆ ಹೋಗಿದ್ದಾರೆ ಕಾಣಿಸ್ತಾ ಇಲ್ಲಾ?

ಮರಿ ಗುಂಡ: ಅಪ್ಪ– ಅಮ್ಮ ಮನೇಲಿ ಇಲ್ಲ. ಅವರಿಬ್ಬರೂ ಹೊಸದಾಗಿ ಬಂದಿರೋ ಕೋತಿಗಳನ್ನು ನೋಡೋಕೆ ಝೂಗೆ ಹೋಗಿದ್ದಾರೆ.!

ಅಕ್ಕ: ಸರಿ ಹೋಯ್ತು! ಅವನ ಅಕ್ಕನ ಮಕ್ಕಳು ಅಪರೂಪಕ್ಕೆ ಬಂದಿದ್ದಾರೆ, ನಿಮ್ ಅಪ್ಪ–ಅಮ್ಮ ಕೋತಿಗಳನ್ನು ನೊಡೋಕೆ ಅಲ್ಲಿಗೇ ಹೋಗಬೇಕಾಗಿತ್ತೇ?

ಗುಂಡ: ಛೇ, ಈ ಫ್ಯಾಮಿಲಿ ಪ್ಲಾನಿಂಗ್ ಪ್ರಕಾರ 'ಮಕ್ಕಳ ನಡುವೆ ಅಂತರ ಇರಲಿ' ಅಂತಾ ಫಾಲೋ ಮಾಡಿದ್ದುತುಂಬಾ ಎಡವಟ್ಟಾಯಿತು.

ಸುಬ್ಬ: ಯಾಕೋ ಅಷ್ಟೊಂದು ಬೇಜಾರು ಮಾಡ್ಕೊಂಡು ಹೇಳ್ತಾ ಇದ್ದೀಯಾ?

ಗುಂಡ: ಏನ್ ಹೇಳೋದು, ನನ್ನ ಮೊದಲನೇ ಮಗ ಅಪ್ಪ ಅಂತಾ ಕರೀತಾನೆ, ಆದ್ರೇ ನನ್ನ ಎರಡನೇ ಮಗಳು ತಾತಾ ಅಂತಾ ಕರೀತಾಳೆ ಕಣಯ್ಯಾ.

***

ಡಾಕ್ಟರ್: ಏನಯ್ಯ ಗುಂಡ ನಿನ್ನ ತೊಂದರೆ?

ಗುಂಡ: ಹೆಂಗೆ ಹೇಳೋದು,ನನಗೆ ನನ್ನ ಭವಿಷ್ಯದ ಬಗ್ಗೆ ಚಿಂತೆ ಡಾಕ್ಟ್ರೇ!

ಡಾಕ್ಟರ್: ಓ ಅಷ್ಟೇನಾ? ನಾನು ನಿನಗೆ ಒಂದ್ ವರ್ಷ ಫುಲ್ ಟ್ರೀಟ್ಮೆಂಟ್ ಕೊಡ್ತೀನಿ. ಫೀಸ್ ತಿಂಗಳಿಗೆ ಒಂದೇ ಸಾವಿರ ರೂಪಾಯಿ, ಅಷ್ಟೇ ಕಣಯ್ಯಾ.

ಗುಂಡ: ಸರಿ.. ಅದು ನಿಮ್ಮ ಭವಿಷ್ಯಕ್ಕೆ ಆಯಿತು, ಆದ್ರೆ ನನ್ನ ಭವಿಷ್ಯ?

***

ಸುಬ್ಬಿ: ಏನ್ರೀ ಇದು ಈ ನೆಂಟರು ನಮ್ಮ ಮನೆಗೆ ವಕ್ಕರಿಸಿ ನಾಲ್ಕು ದಿನ ಆಗ್ತಾ ಬಂದರೂ, ಇವರು ಊರ ಕಡೆ ವಾಪಸ್ ಹೋಗೋ ಸೂಚನೆ ಕಾಣ್ತಿಲ್ಲ.
ಗುಂಡ: ಹೌದಲ್ಲವೇ, ಹಾಗಾದ್ರೆ ಒಂದು ಕೆಲಸ ಮಾಡು. ಇವತ್ತು ಬೆಳಿಗ್ಗೆ ಪಲ್ಲೆಕ್ಕೆ ಉಪ್ಪುಜಾಸ್ತಿ ಹಾಕು. ಮಧ್ಯಾಹ್ನ ಸಾರಿಗೆ ತುಂಬಾ ಖಾರ ಹಾಕು, ಅನ್ನವನ್ನ ಗಂಜಿತರಾ ಮಾಡು, ಮಜ್ಜಿಗೆಗೆ ತುಂಬಾ ನೀರ್ ಹಾಕು ಅಷ್ಟೇ , ಸಂಜೆ ಹೊತ್ತಿಗೆ 'ಒಳ್ಳೇ ರಿಸಲ್ಟ್' ಬರುತ್ತೆ.

***

ಡಾಕ್ಟರ್: ರೀ, ಗುಂಡ ನೀವು ಒಂದು ಲೀಟರ್ ಪೆಟ್ರೋಲಿನಲ್ಲಿ ಎಷ್ಟು ಕಿಲೋಮೀಟರ್ ಕಾರು ಓಡಿಸುತ್ತೀರಿ?

ಗುಂಡ: ಐದು ಕಿಲೋಮೀಟರ್ ಓಡಿಸ್ತೀನಿ ಡಾಕ್ಟ್ರೇ.

ಡಾಕ್ಟರ್: ಏನು ಬರಿ ಐದು ಕಿಲೋಮೀಟರ್ ಅಷ್ಟೇನಾ?

ಗುಂಡ: ಛೇ, ಇಲ್ಲ ಸಾರ್ ಉಳಿದ ಹದಿನೈದು ಕಿಲೋಮೀಟರನ್ನು ನನ್ನ ಹೆಂಡತಿ ಓಡಿಸ್ತಾಳೆ.

***

ಸುಬ್ಬ: ಲೇ ಗುಂಡಾ ನಿನ್ನಂತಹ ಪೋಲಿ ಪಟಾಲಮ್ಮಿಗೆ ಆ ಲಕ್ಷ್ಮಿ ಖಂಡೀತ ಒಲಿಯಲ್ಲಾ ತಿಳ್ಕೋ.

ಗುಂಡ: ಅದು ಗೊತ್ತಾಗೇ ಕಣೋ ನಾನು ಸಿನ್ಸಿಯರ್ ಆಗಿ ಸರಸ್ವತಿಯನ್ನೇ ಲವ್ ಮಾಡ್ತಾ ಇರೋದು.

***

(ಗುಂಡ ಹೊಸದಾಗಿ ಕಾರ್ ತಗೊಂಡು ಡ್ರೈವರ್ ಕರೆದು ಕೊಂಡು ಬಸವನಗುಡಿ ಕಡೇ ಹೊರಟಿದ್ದ ಪಾಪ ಅರ್ಧ ದಾರೀಲೇ ಪೆಟ್ರೋಲ್ ಮುಗಿದು ಹೋಗಬೇಕ?)

ಡ್ರೈವರ್: ಸಾರ್ ಪೆಟ್ರೋಲ್ ಮುಗಿದು ಹೋಗಿದೆ ಸಾರ್ ಕಾರ್ ಇನ್ನು ಮುಂದಕ್ಕೆ ಹೋಗೋಲ್ಲ ಸಾರ್.

ಗುಂಡ: ಹೋಗಲಿ ಬಿಡು, ಅದಕ್ಕೇಕೆ ಯೋಚನೆ ಮಾಡ್ತೀಯಾ? ಇನ್ನೊಂದು ದಿನ ಹೋದ್ರಾಯ್ತು ಕಾರನ್ನು ಮನೆ ಕಡೆ ತಿರುಗಿಸು.

***

ಗುಂಡ: ನನ್ ಹೆಂಡ್ತಿ ತೂಕ ಜಾಸ್ತಿ ಆಗ್ತಾ ಇರೋದಕ್ಕೆ ನಮ್ಮ ಫ್ಯಾಮಿಲಿ ಡಾಕ್ಟರು ನನ್ನನ್ನೇ ಎಗ್ಗಾ ಮಗ್ಗಾ ಬೈದ್ರೂ ಕಣೋ.

ಸುಬ್ಬ: ಇದೊಳ್ಳೆ ಕಥೆ ಆಯ್ತಲ್ಲ. ಅದ್ಸರಿ ನಿನ್ನನ್ನು ಏಕೆ ಬೈದರು?

ಗುಂಡ: ಮನೇಲಿ ಅಡುಗೆ ಮಾಡೋದ್ರಿಂದ ಹಿಡಿದು ಎಲ್ಲಾ ಚಾಕರಿನೂ ನೀನೇ ಯಾಕೆ ಮಾಡ್ತಾ ಇರೋದು ಅಂತ!

***

ಗುಂಡ: ಈ ಭಯಂಕರ ಟೀವಿ ಧಾರಾವಾಹಿಗಳನ್ನು ಪ್ರಸಾರ ಮಾಡುವ ಮಧ್ಯದಲ್ಲಿ ಖಾರ, ಉಪ್ಪು, ಬೇಳೆಗಳ ಜಾಹೀರಾತುಗಳನ್ನ ತೋರಿಸಿದರೆ ತೃಪ್ತಿಯಿಂದ ಊಟ ಮಾಡಬಹುದು ಕಣಯ್ಯ.

ಸುಬ್ಬ: ಅರೇ.. ನೀನು ಊಟ ಮಾಡೋದಕ್ಕೂ ಅದಕ್ಕೂ ಏನಯ್ಯಾ ಸಂಬಂಧ?
ಸುಬ್ಬ: ಇನ್ನೇನು ಬಡ್ಕೊಳ್ಳೋದು! ಆಗಲಾದರೂ ನನ್ನವಳು ನೆನಪು ಮಾಡ್ಕೊಂಡು ಅಡುಗೆಯನ್ನು ಸರಿಯಾಗಿ ಮಾಡ್ತಾಳೆ ಅಂತಾ ಅಂದುಕೊಂಡೆ.

(ಸಂಗ್ರಹ) ಆರ್. ವೀರೇಶ್ ಕುಮಾರ್, ಬೆಂಗಳೂರು

ಗುಂಡ: ಕೆಲವೊಮ್ಮೆ ನೀನು ಒದಗಿಸ ಬಹುದಾದ ಒಂದೇ ಒಂದು ಸಹಾಯ ನನಗೆ ಅತ್ಯವಶ್ಯಕವಾಗಿರುತ್ತದೆ.

ಶ್ರೀಮತಿ ಗುಂಡ (ಉತ್ಸುಕಳಾಗಿ): ಹೌದೇನ್ರೀ.. ಸರಿ, ಒದಗಿಸಿಯೇ ಬಿಡುತ್ತೇನೆ. ಏನದು ಹೇಳಿ.

ಗುಂಡ: ನಿನ್ನ ಗೈರು ಹಾಜರಿ!

***

ಶಾಲೆಯಲ್ಲಿ ಪುಟ್ಟನದೊಂದು ಮುದ್ದು ಪ್ರಶ್ನೆ,

'ನಾನು ಸಮಯವನ್ನು ಉಳಿಸಿದರೆ ನಂತರ ನನಗೆ ಅದು ಯಾವಾಗ ಸಿಗುತ್ತದೆ?'

***

ಗುಂಡನದ್ದೊಂದು ಪುಕ್ಸಟ್ಟೆ ಸಲಹೆ,

'ನನ್ನ ಸಲಹೆಯನ್ನು ತೆಗೆದುಕೊಳ್ಳಿ. ಏಕೆಂದರೆ ನನಗದು ಬೇಕಿಲ್ಲ!'

***

ಪತ್ನಿ: ಪತಿ ಯಾವಾಗಲೂ ತಪ್ಪಾಗಿರುತ್ತಾನೆ, ಪತ್ನಿ ಸದಾ ಸರಿಯಾಗಿರುತ್ತಾಳೆ. ನೀವೇನಂತೀರಿ?

ಪತಿ: ನೀನು ಸರಿ ಕಣೆ.

ಪತ್ನಿ: ಈ ಒಂದು ಸಲ ಮಾತ್ರ ನೀವು ಸರಿ ಕಣ್ರೆ!

***

ಒಮ್ಮೆ ಪತ್ನೀ ಪೀಡಿತ ಗುಂಡ ಮತ್ತು ಶ್ರೀಮತಿ ಗುಂಡ ಪಂಜಾಬಿಗೆ ಹೊರಟಿದ್ದರು. ರೈಲು ನಿಲ್ದಾಣದಲ್ಲಿ ಪಂಜಾಬ್ ಮೇಲ್ ಆಗಮಿಸಿದ ತಕ್ಷಣ ಗುಂಡ ಅದನ್ನು ಹತ್ತಿದ ಮತ್ತು ಶ್ರೀಮತಿಗೆ ಹೇಳಿದ, 'ಪಂಜಾಬ್ ಫೀಮೇಲ್ ಬಂದ ತಕ್ಷಣ ನೀನು ಅದನ್ನು ಹತ್ತಿ ಬಾ'

***

ಹುಡುಗ–ಹುಡುಗಿಯ ಬ್ರೇಕ್ ಅಪ್ ಆದಾಗ ಸಿಟ್ಟಾದ ಹುಡುಗಿ, 'ನೀನು ಪಶ್ಚಾತ್ತಾಪ ಪಡುವೆ, ನಿನಗೆ ನನ್ನಂಥ ಹುಡುಗಿ ಎಂದೂ ಸಿಗಲಾರಳು'

ಹುಡುಗ ಶಾಂತ ಚಿತ್ತನಾಗಿ 'ನನಗೆ ನೀನೇ ಇಷ್ಟವಿಲ್ಲವೆಂದ ಮೇಲೆ ನಿನ್ನಂಥವಳನ್ನೇ ನಾನೇಕೆ ಹುಡುಕಲಿ?'

***

ಗುಂಡನ ಹೆಂಡತಿಗೆ ಬಾಸುಂಡೆ ಬಂದಿದ್ದವು.

ಡಾಕ್ಟರ್: ಇಷ್ಟೊಂದು ಪೆಟ್ಟು ಹೇಗಾಯಿತು?

ಗುಂಡ: ನಾವಿಬ್ಬರೂ ತುಂಬ ಪ್ರೀತಿಸುತ್ತೇವೆ. ಆದರೂ ದಿನಾ ಜಗಳ ಆಡುತ್ತಿದ್ದಳು ಡಾಕ್ಟರ್, ಕಾರಣ ಕೇಳಿದಾಗ ಜಗಳ ಮಾಡುವುದರಿಂದ ಪ್ರೀತಿ ವೃದ್ಧಿಸುವುದೆಂದು ಹೇಳಿದಳು.

ಡಾಕ್ಟರ್: ಮತ್ತೇನಾಯಿತು?

ಗುಂಡ: ಇನ್ನೇನಾಗುತ್ತದೆ ಡಾಕ್ಟರ್? ಪ್ರೀತಿ ಇನ್ನೂ ಹೆಚ್ಚಾಗಲೆಂದು ನಾನೂ ಕೊಂಚ ಜಾಸ್ತಿಯೇ ಜಗಳವಾಡಿಬಿಟ್ಟೆ..!

–ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ